ಒ ಎಸ್ 109/2023 ಪಿ.ಡಬ್ಲ್ಯೂ1

ಇಂದು ದಿಃ 06.01.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 2ನೇ ಪ್ರತಿವಾದಿ ಪರ ವಕೀಲರಿಂದಃ

ನಮ್ಮ ತಂದೆ ತಾಯಿ ಮೃತಪಟ್ಟ ನಂತರ ವಿಭಾಗ ಮಾಡಿಕೊಳ್ಳಬೇಕೆಂದು ನಮ್ಮ 3 ಜನರ ನಡುವೆ ಮಾತುಕತೆಯಾಯಿತು ಎಂದರೆ ಸರಿ. ನಾನು ಸಹಕಾರ ಕೊಡದ ಕಾರಣ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಕೆಲವು ದಾಖಲೆಗಳು ನಮ್ಮ ತಂದೆ ತಾಯಿ ಹೆಸರಿನಲ್ಲಿ ಜಂಟಿಯಾಗಿವೆ ಎಂದರೆ ಸರಿ. ಜಂಟಿ ಇದ್ದ ಕಾರಣ ಖಾತೆ ಮಾಡಿಸಿಕೊಳ್ಳಲು ಪ್ರತಿವಾದಿಗಳು ಯಾವತ್ತೂ ಪ್ರಯತ್ನ ಪಟ್ಟಿಲ್ಲ ಎಂದರೆ ಸರಿಯಲ್ಲ. ಜಂಟಿ ಇದ್ದ ಕಾರಣ ಪ್ರತಿವಾದಿಗಳೇ ಮಾರಟ ಮಾಡಲು ಆಗುವುದಿಲ್ಲ ಎಂದರೆ ಸರಿ. 2ನೇ ಪ್ರತಿವಾದಿ ನನ್ನ ಸಹೋದರಿ. ಅವರಿಗೂ ಸಹ 1/3 ಭಾಗ ಇದೆ ಎಂದರೆ ಸರಿ. ಅವರು ವಿಭಾಗ ಪಡೆದುಕೊಳ್ಳಲು ನನ್ನ ಅಭ್ಯಂತರ ಇಲ್ಲ. ದಾವಾ ಆಸ್ತಿಯು 1/3 ವಿಭಾಗ ಆಗಲು ನನ್ನ ತಕರಾರು ಇಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.